ಎಂದು ನನ್ನ ಅನಿಸಿಕೆ ದಯವಿಟ್ಟು ಹಿಂದೆ ಅನುಸರಿಸಿದ್ದ ಪದ್ಧತಿಯನ್ನೇ ಈಗಲೂ ಕೂಡಾ ಅನುಸರಿಸಿ ವುದು ಸೂಕ್ತ ಎಂದು ನನ್ನ ಸಲಹೆ.

ಅಧ್ಯಕ್ಷರು.— ಮಾನ್ಯ ಜಯಕುಮಾರ್‌ರವರೇ, ವಿವರಣೆ ಎಂದರೆ ಎಂದು ಆದೇಶ ನೀಡಲಾಗಿದೆ ಏನು ಆದೇಶ ಯಾವ ಆರ್ಡರ್ ಪ್ರಕಾರ ನೀಡಿದ್ದೀರಿ ಈ ರೀತಿ ವಿವರಣೆಯನ್ನು ತಾವು ಕೇಳಬೇಕು.

(ಗೊಂದಲ)

ಅಧ್ಯಕ್ಷರು.— ಇದು ಕಾಲಿಂಗ್ ಅಟೆನ್‌ಷನ್, ತಾವು ಕೇಳುವುದಕ್ಕೆ ಬರುವುದಿಲ್ಲ ಕೂಡ್ರಿ.

ಶ್ರೀ ಬಿ. ಸೋಮಶೇಖರ್.— ಅಧ್ಯಕ್ಷರೇ, ಹೋದ ಸಾರಿ ಮಾನ್ಯ ವೆಂಕಟರಾಮಯ್ಯನವರಿಗೆ ಉತ್ತರ ಕೊಟ್ಟಿದ್ದಕ್ಕೂ ಇದಕ್ಕೂ ಬಹಳ ವ್ಯತ್ಯಾಸ ಇದೆ. ಹೋದ ಸಾರಿ ಆರ್ಥಿಕ ವಿಷಯವು ಇದ್ದುದರಿಂದ ಸ್ವಲ್ಪ ವಿಳಂಬವಾಯಿತು. ಈಗ ಮಾನ್ಯ ಮುಖ್ಯ ಮಂತ್ರಿಗಳು ಸ್ವಲ್ಪ ದೊಡ್ಡ ಮನಸ್ಸು ಮಾಡಿ ಶಿಕ್ಷಕರ ಬಗ್ಗೆ ವಿನಾಯಿತಿಯನ್ನು ತೋರಿಸಿದ್ದಾರೆ. ಈಗಾಗಲೇ ಆದೇಶವನ್ನು ಸಹಾ ಹೊರಡಿಸಿದ್ದೇವೆ. ಸಂದರ್ಶನ ಮಾಡಬೇಕಾಗಿದೆ. ಒಂದು ತಿಂಗಳಲ್ಲಿಯೇ ಸಂದರ್ಶನವನ್ನು ಪ್ರಾರಂಭ ಮಾಡುತ್ತೇನೆ. ಆದಷ್ಟು ಶೀಘ್ರವಾಗಿ ಈ ಶಿಕ್ಷಣ ಹುದ್ದೆಯನ್ನು ತುಂಬುತ್ತೇವೆ.

ಶ್ರೀ ಡಿ. ಟಿ ಜಯಕುಮಾರ್.— ಅಧ್ಯಕ್ಷರೇ, ಇದು ಬಡ ಮಕ್ಕಳ ವಿಚಾರ. ಹಳ್ಳಿಗಾಡು ಗಳಲ್ಲಿ ಬರೀ ಬಡವರ ಮಕ್ಕಳು ಇರುವುದು ಸಾವಿರಾರು ರೂಪಾಯಿಗಳನ್ನು ಕೊಟ್ಟು ಕಾನ್ವೆಂಟ್‌ನಲ್ಲಿ ಆ ಮಕ್ಕಳನ್ನು ಸೇರಿಸಿಲ್ಲ. ಆದ್ದರಿಂದ ದಯವಾಡಿ ಆದಷ್ಟು ಬೇಗ ಈ ಕೆಲಸವನ್ನು ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್.— ಆಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಮುಖ್ಯ ಮಂತ್ರಿಗಳು ಗೌರ್ನ್‌ಮೆಂಟ್ ಆರ್ಡರನ್ನು ಅಪ್ರೂವ್ ಮಾಡಿದ ಮೇಲೆ ಯಾವಾಗ ಆರ್ಡರನ್ನು ಹೊರಡಿಸಿದ್ದೀರಿ ? ಅದನ್ನು ಯಾವ ಡೇಟ್‌ಗೆ ಹೊರಡಿಸಿದೆ ಎಂದು ಹೇಳಿದರೆ ಒಳ್ಳೆಯದು.

ಶ್ರೀ ಬಿ. ಸೋಮಶೇಖರ್.— ಮಾನ್ಯ ಅಧ್ಯಕ್ಷರೇ, ೨೦-೫-೮೮ ರಲ್ಲಿ ನಾವು ಆದೇಶವನ್ನು ಹೊರಡಿಸಿದ್ದೇವೆ.

ಅಧ್ಯಕ್ಷರು.— ಈಗ ಕರೆಕ್ಟ್ ಉತ್ತರ ಹೇಳಿದರು. ಈಗ ಶ್ರೀ ಪಂಪಾಪತಿಯವರು, ಶ್ರೀ ಕೆ. ಬಿ. ಶಾಣಪ್ಪನವರು ಹಾಗೂ ಶ್ರೀ ಭೂಪತಿಯವರು ಗಮನ ಸೆಳೆಯುವುದು.

೪) ರಾಜ್ಯದಲ್ಲಿ ರೈತರು ತಮ್ಮ ಬೇಡಿಕೆಗಳನ್ನು ಸರ್ಕಾರಕ್ಕೆ ಸಲ್ಲಿಸಿ ಜಾಥಾ ಬಂದಿರುವುದರ ಬಗ್ಗೆ

ಶ್ರೀ ಕೆ ಬಿ. ಶಾಣಪ್ಪ.— ಮಾನ್ಯ ಅಧ್ಯಕ್ಷರೇ, ರಾಜ್ಯದ ರೈತರಿಗೆ ಕೃಷಿಗಾಗುವ ಖರ್ಚು, ಕೃಷಿ ಉತ್ಪನ್ನದಲ್ಲಿನ ಅಂತರ, ಬೇನಾಮಿ ಹಿಡುವಳಿ ಹಾಗೂ ಅರಣ್ಯ ಜಮೀನುಗಳ ಸಾಗುವಳಿದಾರರಿಗೆ ಪಟ್ಟ ಮುಂತಾದ ರೈತರುಗಳ ಬೇಡಿಕೆಗಳಿಗೆ ಬೆಂಗಳೂರಿಗೆ ಜಾಥಾ ಬಂದಿರುವ ಬಗ್ಗೆ ಮಾನ್ಯ ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ನೀರಾವರಿ ಮಂತ್ರಿಗಳು). —

ಗಮನ ಸೆಳೆಯುವ ಸೂಚನೆಯಲ್ಲಿ ರಾಜ್ಯದ ರೈತರ ಸಮಸ್ಯೆಗಳನ್ನು ನಾಲ್ಕು ಅಂಶಗಳಲ್ಲಿ ವಿಭಾಗಿಸಲಾಗಿದೆ.

ಅ) ಕೃಷಿಯಲ್ಲಿ ತೊಡಗಿದ ರೈತರಿಗೆ ಆಗುತ್ತಿರುವ ಖರ್ಚು

ಆ) ರೈತರ ಕೃಷಿ ಉತ್ಪನ್ನದ ಬೆಲೆಯಲ್ಲಿನ ಅಂತರ

ಇ) ಬೇನಾಮಿ ಹಿಡುವಳಿ

ಮತ್ತು

ಈ) ಅರಣ್ಯ ಜಮೀನುಗಳ ಸಾಗುವಳಿದಾರರಿಗೆ ಸಾಗುವಳಿ ಪಟ್ಟಿ ನೀಡುವ ಬಗ್ಗೆ ಶೋರುತ್ತಿರುವ ನಿರ್ಲಕ್ಷ್ಯತನ.

ಮೇಲೆ ನಮೂದಿಸಿದ ಅಂಶಗಳ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವನ್ನು ಅನುಕ್ರಮವಾಗಿ ಹೀಗೆ ಹೇಳಬಯಸುತ್ತೇನೆ,

ಅ) ಮತ್ತು ಆ) ಕೃಷಿ ಉತ್ಪಾದನೆಗಳಿಗೆ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರವು ಕೃಷಿಉತ್ಪನ್ನ ವೆಚ್ಚ ಮತ್ತು ಬೆಲೆಯ ಆಯೋಗ ಮತ್ತು ರಾಜ್ಯ ಸರ್ಕಾರಗಳಿಂ ಮಾಡುವ ಶಿಫಾರಸ್ಸನ್ನು ಪರಿಗಣಿಸಿ ನಿಗದಿ ಮಾಡುವುದು. ರಾಜ್ಯ ಸರ್ಕಾರವು ರಾಜ್ಯ ರೈತರ ಸಮಸ್ಯೆಗಳ ಅಧ್ಯಯನ ಸಮಿತಿ ಮತ್ತು ಕೃಷಿ ಇಲಾಖೆಯು ಕೃಷಿ ಉತ್ಪನ್ನ ವೆಚ ದ ಬಗ್ಗೆ ಅಧ್ಯಯನ ನಡೆಸಿ ಸೂಚಿಸಿಂವ ಬೆಂಬಲ ಬೆಲೆಗಳಲ್ಲಿ ಯಾವುದು ಹೆಚ್ಚಾಗಿರುವುದೋ ಅಂತಹ ಬೆಲೆಯನ್ನು ನಿಗದಿ ಮಾಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿರುತ್ತದೆ. ಆದರೆ ಕೇಂದ್ರ ಸರ್ಕಾರವು ನಿಗದಿ ಮಾಡುವ ಬೆಂಬಲ ಬೆಲೆಯು ರಾಜ್ಯ ಸರ್ಕಾರ ಶಿಫಾರಸ್ಸು ಮಾಡುವ ಬೆಲೆಗಿಂತ ಕಡಿಮೆ ಇರುತ್ತದೆ.

ಇ) ಸರ್ಕಾರಿ ಜಮೀನಿನ ಅನಧಿಕೃತ ಅಧಿಬೋಗವನ್ನು ಸಕ್ರಮಗೊಳಿಸುವುದಕ್ಕಾಗಿ ೧೯೭೦ರಲ್ಲಿ ಕರ್ನಾಟಕ ಭೂ ಕಂಡಾಯ ಅಧಿನಿಯಮ ೯೪ ಎ ಅನ್ನು ಕರ್ನಾಟಕ ಭೂ ಕಂದಾಯ ಕಾಯಿದೆಗೆ ಸೇರಿಸಲಾಯಿತು ಮತ್ತು ಈ ಅಧಿನಿಯಮವನ್ನು ತಿದ್ದುಪಡಿ ಮಾಡುವುದರ ಮೂಲಕ ದಿನಾಂಕ ೨೪-೧೨-೧೯೭೫ರಂದು ಬಿಟ್ಟುಬಿಡಲಾಯಿತು. ನಂತರ ಸರ್ಕಾರವು ಕೃಷಿ ಉದ್ದೇಶಗಳಿಗಾಗಿ ಸರ್ಕಾರಿ ಜಮೀನಿನ ಮೇಲಿನ ಒತ್ತುವರಿಗಳನ್ನು ಸಕ್ರಮಗೊಳಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸಲು ಆಡಳಿತ ಸಂಬಂಧವಾಗಿ ಆದೇಶಗಳನ್ನು ಹೊರಡಿಸಿತ್ತು. ಆ ಪ್ರಕಾರ ಅರ್ಹರಾದಂತಹ ವ್ಯಕ್ತಿಗಳಿಗೆ ಕಂದಾಯ ಅಧಿಕಾರಿಗಳಲ್ಲಿ ತಮ್ಮ ಅರ್ಜಿಗಳನ್ನು ದಾಖಲು ಮಾಡುವುದಕ್ಕೆ ದಿನಾಂಕ ೧೫-೧೧-೧೯೭೮ರ ವರೆಗೆ ಕಾಲಾವಕಾಶ ನೀಡಲಾಗಿತ್ತು. ನಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವ್ಯಕ್ತಿಗಳಿಗೆ ವಿಶೇಷವಾಗಿ ಪ್ರಯೋಜನ ಕಲ್ಪಿಸುವುದಕ್ಕಾಗಿ ಸರ್ಕಾರವು ದಿನಾಂಕ ೨೭-೩-೧೯೮೧ರಂದು ಮತ್ತೊಂದು ಆದೇಶವನ್ನು ಹೊರಡಿಸಿ ದಿನಾಂಕ ೧೯-೧೧೭೮ಕ್ಕೆ ಹಿಂದೆ, ಕಡೇ ಪಕ್ಷ ಒಂದು ವರ್ಷ ಅವಧಿಯವರೆಗೆ ಸಾಗುವಳಿ ಉದ್ದೇಶಗಳಿಗಾಗಿ ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿಕೊಂಡಿದ್ದಂತಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವ್ಯಕ್ತಿಗಳು ೨ ಹೆಕ್ಟೇರ್‌ರವರೆಗೆ ಖಿಷ್ಕಿ ಜಮೀನು ಅಥವಾ ಅದಕ್ಕೆ ಸಮಾನ ವಾದಂದನ್ನು (ತಪ್ಪುಸ್ಥಂತ ಹಿಡುವಳಿಯೂ ಸೇರಿದಂತೆ) ಸಕ್ರಮಗೊಳಿಸಲು ಆದೇಶ ನೀಡಲಾಗಿದ್ದಿತು ಈ ಆದೇಶದ ಪ್ರಕಾರ ಕಂದಾಯ ಅಧಿಕಾರಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ದಿನಾಂಕ ೧೫-೮-೧೯೮೨ರ ವರೆಗೆ ಕಾಲಾವಕಾಶವನ್ನು ನೀಡಲಾಗಿದ್ದಿತ್ತು.

ಮೇಲ್ಕಂಡ ಆದೇಶಗಳ ಪ್ರಕಾರ ಕ್ರಮ ಕೈಗೊಂಡಿದ್ದಾಗ್ಯೂ ಸರ್ಕಾರಿ ಜಮೀನುಗಳಲ್ಲಿನ ಅನಧಿಕೃತಸಾಗುವಳಿಗಳು ಮುಂದುವರಿಯುತ್ತಲ್ಲಿದ್ದು, ಇನ್ನು ಮುಂದೆ ಒತ್ತುವರಿಗಳನ್ನು ಮಾಡದಂತೆ ತಡೆಗಟ್ಟುವುದಕ್ಕಾಗಿ ಮತ್ತು ಈ ರಿಯಾಯಿತಿಯ ದುರುಪಯೋಗದ ಸಾಧ್ಯತೆಗೆ ವಿರುದ್ಧವಾಗಿ ಅಗತ್ಯ ರಕ್ಷಣೆಗಳೊಂದಿಗೆ ಯೋಗ್ಯ ಪ್ರಕರಣಗಳಲ್ಲಿ ಒತ್ತುವರಿಗಳನ್ನು ಸಕ್ರಮ ಗೊಳಿಸುವುದಕ್ಕಾಗಿ ಸೂಕ್ತ ಉಪನಿಬಂಧಗಳನ್ನು ಮಾಡಲು ಒಂದು ನಿರ್ಧಾರವನ್ನು ತೆಗೆದುಕೊಂಡು ಅದಕ್ಕೆ ಸಂಬಂಧಪಟ್ಟಂತೆ ಭೂ ಕಾಯಿದೆ ಮಸೂದೆಗೆ ಸೆಕ್ಷನ್ ೯೪ಕ್ಕೆ ಒಂದು ತಿದ್ದುಪಡಿಯನ್ನು ಈಗಾಗಲೇ ವಿಧಾನ ಮಂಡಲದಲ್ಲಿ ಮಂಡಿಸಲಾಗಿದೆ. ಈ ಮಸೂದೆಯನ್ನು ಎರಡೂ ಸದನಗಳ ಜಂಟಿ ಸಲಹಾ ಸಮಿತಿಗೆ ಕಳುಹಿಸಿ ಕೊಟ್ಟಿದ್ದು ಸಮಿತಿಯು ಅದನ್ನು ಪರಿಶೀಲಿಸಿ ಸೂಕ್ತ ತಿದ್ದುಪಡಿಗಳೊಡನೆ ವರದಿ ಒಪ್ಪಿಸಿದೆ. ಈ ತಿದ್ದುಪಡಿ ಮಸೂದೆಯನ್ನು ಈಗಾಗಲೇ ಸದನದಲ್ಲಿ ಮಂಡಿಸಿದೆ. ಸದನವು ಈ ಮಸೂದೆಗೆ ಒಪ್ಪಿಗೆ ನೀಡಿದ ನಂತರ ಆ ಪ್ರಕಾರ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

ಮೇಲ್ಕಂಡ ಪಸೂದೆಯಲ್ಲಿ ದಿನಾಂಕ ೧-೭-೧೯೮೬ಕ್ಕಿಂತ ಮುಂಚಿತವಾಗಿ ಅನಧಿಕೃತ ಸಾಗುವಳಿ ಆಗಿರುವ ಜಮೀನುಗಳನ್ನು ಮಾತ್ರ ಸಕ್ರಮಗೊಳಿಸಲು ಉದ್ದೇಶಿಸಲಾಗಿದೆ. ಮೇಲೆ ನಮೂದಿಸಿದ ಮಸೂದೆಯು ಪಾಸಾಗುವವರೆಗೆ ಸೂಕ್ತ ಸೂಚನೆಗಳನ್ನು ಜಿಲ್ಲಾಧಿಕಾರಿಗಳಿಗೆ ದಿನಾಂಕ ೨೮-೧೨-೧೯೮೭ರ ಸುತ್ತೋಲೆಯಲ್ಲಿ ಕೊಡಲಾಗಿದೆ.

ಈ) ದಿನಾಂಕ ೭-೩-೧೯೮೭ರಂದು ಹೊರಡಿಸಿದ ಆದೇಶದಲ್ಲಿ ನಿಗದಿಪಡಿಸಿದ ಕ್ರಮಗಳನ್ನು ನಾನು ಈ ಕೆಳಗೆ ನಮೂದಿಸಬಯಸುತ್ತೇನೆ.—

೧) ದಿನಾಂಕ ೨೭-೪-೧೯೭೮ರಂದು ಇರುವ ಸ್ಥಿತಿಯ ಪ್ರಕಾರ ಒತ್ತುವರಿ ಮಾಡಲ್ಪಟ್ಟ ಭೂಮಿಯು ಮೀಸಲುಗಳ ಸುತ್ತ ಹಳ್ಳಗಳನ್ನು ತೋಡಿ ಗುರುತಿಸುವುದು. ಇದರಿಂದ ಹೊಸದಾಗಿ ಮಾಡಬಹುದಾದ ಒತ್ತುವರಿಗಳನ್ನು ತಕ್ಷಣವೇ ಗುರುತಿಸಿ ಅನಧಿಕೃತ ಒತ್ತುವರಿದಾರರನ್ನು ಅಲ್ಲಿಂದ ಹೊರಹಾಕುವುದು.

೨) ಸಂಬಂಧಿಸುವ ಉಪ ಅರಣ್ಯಾಧಿಕಾರಿಗಳು ದಿನಾಂಕ ೨೭-೪-೧೯೭೮ರ ಅವರಿಗೆ ಹಿಂದಿನ ಕಾಲದಲ್ಲಿ ಸ್ಪಷ್ಟವಾಗಿ ಒತ್ತುವರಿ ಮಾಡಲ್ಪಟ್ಟ ಪ್ರಕರಣಗಳ ಬಗ್ಗೆ ದಾಖಲೆಗಳನ್ನು ನಿರ್ಮಿಸುವುದು ಮತ್ತು ಅವುಗಳನ್ನು ರಾಜ್ಯ ಸರ್ಕಾರದ ಪಟುಖಾಂತರ. ಅರಣ್ಯ ಸಂರಕ್ಷಣಾ ಕಾಯಿದೆ ೧೯೮೦ರ ಪ್ರಕಾರ ಒಪ್ಪಿಗೆಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸುವುದು ಈ ದಿಶೆಯಲ್ಲಿ ಪ್ರಕರಣಗಳನ್ನು ಶಿಫಾರಸ್ಸು ಮಾಡುವ ಮುನ್ನಾ ಕಂದಾಯ ಇಲಾಖೆಯವರು ಸುತ್ತೋಲೆ ಸಂಖ್ಯೆ/ಆರ್‌ಡಿ ೬೬ ಎಲ್‌ಜಿಪಿ ೭೪(೩),ದಿನಾಂಕ ೩೦-೪-೧೯೮೦ರಲ್ಲಿ ಹೊರಡಿಸಿರುವ ಮಾರ್ಗದರ್ಶನಗಳನ್ನು ಅನುಸರಿಸುವುದು ಮತ್ತು ದಿನಾಂಕ ೧೪-೭-೧೯೮೧ರಂದು ಮುಖ್ಯ ಕಾರ್ಯದರ್ಶಿಗಳ ಕಚೇರಿಯಲ್ಲಿ ನಡೆದ ಸಭೆಯ ನಡವಳಿಗಳನ್ನು ಪಾಲಿಸುವುದು,

೩) ದಿನಾಂಕ ೨೭-೪-೧೯೭೮ರ ಮುನ್ನ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿದ ಮತ್ತು ಇಂತಹ ಯಾವ ಪ್ರಕರಣಗಳಲ್ಲಿ ವಿವಾದಗಳು ಇಲ್ಲವೋ ಅಂತಹ ಪ್ರಕರಣಗಳ ದಾಖಲೆಗಳನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳು ಸಂಬಂಧಿತ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಒಂದು ತಿಂಗಳ ಅವಧಿಯೊಳಗಾಗಿ ಸಲ್ಲಿಸುವುದು ಮತ್ತು ಸದರಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅಂತಹ ಪ್ರಕರಣಗಳ ದಾಖಲೆಗಳನ್ನು ನಿರ್ಮಿಸಿ ಅವುಗಳನ್ನು ಸೂಕ್ತ ಮೇಲಧಿಕಾರಿ ಮೂಲಕ ಸಂಬಂಧಿಸಿದ ಸಮಿತಿಯು ರಚಿಸಿಕೊಂಡ ೬ ತಿಂಗಳ ಕಾಲಾವಧಿಯೊಳಗಾಗಿ ಸಲ್ಲಿಸುವುದು.

(೪) ದಿನಾಂಕ ೨೭-೪-೧೯೭೮ರ ಮುನ್ನ ಮೂಲ ಒತ್ತುವರಿದಾರರು ಸಂಬಂಧಿಸಿದ ಭೂಮಿಯನ್ನು ಅನಧಿಕೃತವಾಗಿ ಲೀಸ್ ಮಾಡಿದ್ದರೆ ಇಲ್ಲವೇ ಬೇರೆಯವರಿಗೆ ವರ್ಗಾವಣೆ ಮಾಡಿದ್ದರೆ ಅಂತಹ ಒತ್ತುವರಿ ಪ್ರಕರಣಗಳನ್ನು ಸಕ್ರಮಗೊಳಿಸಕೂಡದು. ಆದಾಗ್ಯೂ ಇದಕ್ಕೂ ಮುನ್ನ ಹೊರಡಿಸಲಾದ ಮಾರ್ಗದರ್ಶನಗಳ ಪ್ರಕಾರ ಭೂ ರಹಿತ ಆಥವಾ ಕಡಿಮೆ ಹಿಡುವಳಿಯುಳ್ಳ ಫಲಾನುಭವಿಗಳು ಮಾಡಿದ ಕೊಂಡುಕೊಳ್ಳುವಿಕೆ, ಲೀಸ್ ಮಾಡುವಿಕೆ ಮತ್ತು ವರ್ಗಾವಣೆ ಮಾಡುವಿಕೆಗಳನ್ನು ಸಕ್ರಮಗೊಳಿಸಲು ಪರಿಗಣಿಸುವುದು.

(೫) ದಿನಾಂಕ ೨೭-೪-೧೯೭೮ರ ಮುನ್ನ ಒತ್ತುವರಿ ಮಾಡಲಾದ ವಿಷಯದ ಬಗ್ಗೆ ಎಲ್ಲಿ ಸಂದೇಹವಿದೆಯೋ ಅಂತಹ ಪ್ರಕರಣಗಳನ್ನು ಪರಿಗಣಿಸಲು ಸಂಬಂಧಿಸಿದ ಶಾಸಕರು, ಸಹಾಯಕ ಅರಣ್ಯ ಸಂರಕ್ಷಕರು ಮತ್ತು ತಹಸೀಲ್ದಾರರನ್ನು ಒಳಗೊಂಡು ನೇಮಕವಾಗಲಿರುವ ತಾಲ್ಲೂಕು ಮಟ್ಟದ ಸಮಿತಿಗೆ ಪರಿಶೀಲನೆಗಾಗಿ ಒಪ್ಪಿಸುವುದು.

(೬) ಯಾವ ಒತ್ತುವರಿ ಪ್ರಕರಣಗಳನ್ನು ಸಕ್ರಮಗೊಳಿಸಬೇಕೆಂದು ಯೋಚಿಸಲಾಗಿದೆಯೋ ಅಂತಹ ಭೂಮಿಗಳಲ್ಲಿ, ಫಲಾನುಭವಿಗಳು ಸಂಬಂಧಿಸಿದ ಭೂಮಿಯ ಶೇ. ೫೦ರಷ್ಟು ಭಾಗದಲ್ಲಿ ಅರಣ್ಯ ಇಲಾಖೆಯವರು ನೀಡುವ ಜಾತಿಯ ಗಿಡಗಳನ್ನು ನೆಡುವಂತೆ ಅವರನ್ನು ಒತ್ತಾಯಿಸುವುದು. ಮತ್ತು ಇಂತಹ ಭೂಮಿಗಳಲ್ಲಿ ಗುಡಿಸಲುಗಳನ್ನು

ಮತ್ತು ದನದ ಕೊಟ್ಟಿಗೆಗಳು ಇದ್ದ ಪಕ್ಷದಲ್ಲಿ ಅವುಗಳನ್ನು ಅಲ್ಲಿಂದ ವರ್ಗಾಯಿಸಲು ಅನುಕೂಲವಾಗುವಂತೆ ಅರಣ್ಯ ಇಲಾಖೆಯವರು ಈ ಫಲಾನುಭವಿಗಳಿಗೆ ಕಂಬ, ಬಿದಿರು ಮತ್ತು ಇನ್ನಿತರ ಗುಡಿಸಲು ಮತ್ತು ದನದ ಕೊಟ್ಟಿಗಗಳನ್ನು ಕಟ್ಟಲು ಬೇಕಾಗುವ ಸಾಮಾಗ್ರಿಗಳನ್ನು ಒದಗಿಸುವುದು.

(೭) ಸರ್ವೆ ಮತ್ತು ಭೂದಾಖಲೆಗಳ ನಿರ್ದೇಶಕರು ತಮ್ಮ ಇಲಾಖೆಯ ಸರ್ವೆಯರ್‌ಗಳ ಸೇವೆಗಳನ್ನು ಒದಗಿಸಿ ಈ ಒತ್ತುವರಿ ಭೂವಿಂಗಳನ್ನು ಗುರುತು ಮಾಡುವ ಕಾರ್ಯದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಹಾಯ ಒದಗಿಸುವುದು.

ದಿನಾಂಕ ೨೭-೪-೧೯೭೮ರ ಮುನ್ನ ನಿಜವಾಗಿ ಒತ್ತುವರಿ ಸಂಭವಿಸಿದೆಯೋ, ಇಲ್ಲವೋ ಎಂಬುದನ್ನು ನಿರ್ಧರಿಸಲು ಪ್ರತಿ ತಾಲ್ಲೂಕಿನಲ್ಲಿ ಕೆಳಗೆ ನಮೂದಿಸಿದಂತೆ ಸದಸ್ಯರುಳ್ಳ ಸಮಿತಿಯನ್ನು ಸರ್ಕಾರವು ರಚಿಸಿದೆ :

೧.	ಉಪ ಅರಣ್ಯ ಸಂರಕ್ಷಣಾಧಿಕಾರಿ	ಅಧ್ಯಕ್ಷರು
೨.	ಸ್ಥಳೀಯ ಶಾಸಕರು	ಸದಸ್ಯರು
೩.	ಸಂಬಂಧಿಸಿದ ತಹಸೀಲ್ದಾರರು	ಸದಸ್ಯರು
೪.	ಅಧಿಕಾರೇತರ ಪ್ರತಿನಿಧಿ	ಸದಸ್ಯರು
೫.	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು	ಸದಸ್ಯ ಕಾರ್ಯದರ್ಶಿ

ಅಧಿಕಾರೇತರ ಸದಸ್ಯರು ನೇಮಕಾತಿಗಳ ಬಗ್ಗೆ ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದು. ಅಧಿಕಾರೇತರ ಸದಸ್ಯರುಗಳಿಗೆ ಕೊಡಲಾಗುವ ಪ್ರವಾಸ ಮತ್ತು ದೈನಂದಿನ ಭತ್ಯೆಗಳನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ ೫೭ ಎಸ್‌ಆರ್‌ಎಸ್ ೮೫ ದಿನಾಂಕ ೧-೫-೧೯೮೫ರ ಪ್ರಕಾರ ಕೊಡಲಾಗುವುದು.

ಮೇಲೆ ಉಲ್ಲೇಖಿಸಿದ ಸಮಿತಿಯು, ದಿನಾಂಕ ೨೭-೪-೧೯೭೮ರ ಮುನ್ನ ಸಂಭವಿಸಿದ ಒತ್ತುವರಿ ಪ್ರಕರಣಗಳಿಗೆ ನಿರ್ಧರಿಸಲಾದ ಕೆಳಗೆ ನಮೂದಿಸಿದ ಅಂಶಗಳನ್ನು ಪರಿಶೀಲಿಸುವುದು.

೧) ದಿನಾಂಕ ೨೭-೪-೧೯೭೮ರ ಮೊದಲಿನ ಅವಧಿಯಲ್ಲಿ ಒತ್ತುವರಿಯಾಗಿದೆ ಎಂಬ ಬಗ್ಗೆ ರುಜುವಾತುಪಡಿಸುವ ಅರಣ್ಯ ಅಥವಾ ಕಂದಾಯ ದಾಖಲೆಗಳು

೨) ಒತ್ತುವರಿಯಾದ ಭೂವಿಯಲ್ಲಿ ಬೆಳೆಸಲ್ಪಟ್ಟ ಗಿಡ ಅಥವಾ ಬೆಳೆಯ ವಯಸ್ಸು ಅಥವಾ ಸ್ಥಿತಿ.

೩) ದಿನಾಂಕ ೨೭-೪-೧೯೭೮ರ ಮುನ್ನ ಒತ್ತುವರಿದಾರನ ಮನವಿ ಮತ್ತು ಅದರ ರಸೀತಿ ಬಗ್ಗೆ.

೪) ಅರಣ್ಯ ಇಲಾಖೆಗೆ ದಂಡವನ್ನು ಕಟ್ಟಿದ ಅಥವಾ ಕಂದಾಯ ಇಲಾಖೆ ಟಿ.ಟಿ. ದಂಡವನ್ನು ಕಟ್ಟಿದ ಬಗ್ಗೆ ಪಡೆಯಲಾದ ರಸೀತಿ.

೫) ದಿನಾಂಕ ೨೭-೪-೧೯೭೮ರ ಹಿಂದೆ ಒತ್ತುವರಿಯಾಗಿದೆ ಎಂಬ ಬಗ್ಗೆ ರುಜುವಾತು ಪಡಿಸುವ ಇನ್ನಿತರ ಯಾವುದೇ ಸಾಕ್ಷ್ಯಾಧಾರಗಳು.

೬) ಆ ತಾಲ್ಲೂಕಿನಲ್ಲಿ ಕೆಲಸ ಮಾಡುತ್ತಿರುವ ಯಾವುದಾದರೂ ಸ್ವಯಂ ಸೇವಾ ಸಂಸ್ಥೆಗಳಿದ್ದಲ್ಲಿ ಅವರು ಕೂಡ ತಮ್ಮ ಅಭಿಪ್ರಾಯವನ್ನು ತಿಳಿಸಲು ಅವಕಾಶನೀಡುವುದು.

ಸಮಿತಿಗೆ ಪರಿಶೀಲನೆಗಾಗಿ ಒಪ್ಪಿಸಿದ ಪ್ರಕರಣಗಳನ್ನು ಸಮಿತಿಯು ಮೂರು ತಿಂಗಳೊಳಗಾಗಿ ತೀರ್ಮಾನಿಸುವುದು.

ಶ್ರೀ ಕೆ. ಬಿ. ಶಾಣಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸಮ್ಮಗವಾಗಿ ಸೆಳೆಯುವ ಸೂಚನೆಗೆ ವಿವರವಾದ ವರದಿ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ ನಮ್ಮ ರೈತ ಸಂಘದ ವತಿಯಿಂದ ಶಿವಿನೇ ತಾರೀಖು ನಡೆಯಂಥ ಸಭೆಯಲ್ಲಿ ಸುಮಾರು ಐದು ಸಮಸ್ಯೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದೆವು. ಅದರಲ್ಲಿ ಮುಖ್ಯವಾದುದು ಸರ್ಕಾರದ ಜಮೀನಿನಲ್ಲಿ ಕಳೆದ

೨೦–೨೫ ವರ್ಷಗಳಿಂದ ಯಾರು ಯಾರು ಸಾಗುವಳಿ ಮಾಡಿಕೊಂಡು ಬಂದಿದ್ದಾರೆ, ಅಂತಹವರ ಹೆಸರುಗಳಿಗೆ ಆ ಜಮೀನಿನ ಪಟ್ಟಾ ನೀಡಬೇಕು ಎಂಬುದು ಒಂದು. ಇದಕ್ಕೆ ಸಂಬಂಧಪಟ್ಟಂತೆ ತಾವು ತಮ್ಮ ಉತ್ತರದಲ್ಲಿ ಹೀಗೆ ಹೇಳಿದ್ದೀರಿ. —

> "ಸರ್ಕಾರಿ ಜಮೀನಿನ ಅನಧಿಕೃತ ಅಧಿಭೋಗವನ್ನು ಸಕ್ರಮಗೊಳಿಸುವುದಕ್ಕಾಗಿ ೧೯೭೦ರಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮಕ್ಕೆ ೪೪–ಎ ಅನ್ನು ಕರ್ನಾಟಕ ಭೂ ಕಂದಾಯ ಕಾಯಿದೆಗೆ ಸೇರಿಸಲಾಯಿತು."

ಎಂದು. ಇದರ ಜೊತೆಗೆ ಯಾರು ಯಾರು ಈ ರೀತಿ ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ, ಅಂತಹವರು ಕಂದಾಯ ಅಧಿಕಾರಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ದಿ ೧೫–೮–೧೯೮೦ರವರೆಗೆ ಕಾಲಾವಕಾಶ ನೀಡಲಾಗಿದ್ದಿತು ಎಂದು ಇಲ್ಲಿ ಹೇಳಿದ್ದೀರಿ. ಇದರ ಜೊತೆಗೆ ದಿ: ೧–೨–೧೯೮೪ಕ್ಕಿಂತ ಮುಂಚಿತವಾಗಿ ಅನಧಿಕೃತ ಸಾಗುವಳಿ ಆಗಿರುವ ಜಮೀನುಗಳನ್ನು ಮಾತ್ರ ಸಕ್ರಮಗೊಳಿಸಲು ಉದ್ದೇಶಿಸಲಾಗಿದೆ ಎಂದು ಇಲ್ಲಿ ಹೇಳಿದ್ದೀರಿ. ಈ ತಾರೀಖುಗಳಿಗಿಂತ ಮುಂಚಿತವಾಗಿ ಅಂದರೆ ಕಳೆದ ೧೫ ವರ್ಷಗಳಿಂದ ಯಾರು ಯಾರು ಸರ್ಕಾರದ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡು ಬಂದಿದ್ದಾರೋ ಅಂತಹ ಜಮೀನುಗಳನ್ನು ಅವರವರ ಹೆಸರಿಗೆ ಮಾಡಬೇಕೆಂದು ಸರ್ಕಾರದ ಆದೇಶವಿದ್ದರೂ ಸಹ ದುರ್ದೈವದಿಂದ ಏನಾಗಿದೆ ಎಂದರೆ, ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರರು ಇಂತಹ ಸಿ ಮತ್ತು ಡಿ ಜಮೀನುಗಳನ್ನು ಕೇಂದ್ರ ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದಾರೆ. ಇದಾದ ಮೇಲೆ ಅರಣ್ಯಾಧಿಕಾರಿಗಳು ಇಂತಹವರ ಜಮೀನುಗಳಿಗೆ ಹೋಗಿ, ಸರ್ಕಾರ ನಮಗೆ ಈ ಜಮೀನುಗಳನ್ನು ಬಿಟ್ಟುಕೊಟ್ಟಿದೆ ಎಂದು ಹೇಳಿ ಜಬರ್‌ದಸ್ತಿನಿಂದ ಅಲ್ಲಿ ಗಿಡಗಳನ್ನನ್ನು ನೆಟ್ಟಿರುವುದನ್ನು ನಾವು ನೋಡಿದ್ದೇವೆ. ಆದ್ದರಿಂದ ಈ ಬಗ್ಗೆ ಹೊಸ ಕಾನೂನು ಮಾಡುವಾಗ ಇಂತಹ ಜಮೀನುಗಳಲ್ಲಿ ಯಾರು ಯಾರು ಸಾಗುವಳಿ ಮಾಡುತ್ತಿದ್ದರು, ಅಂತಹವರಿಗೆ ಸರ್ಕಾರ ಏನಾದರೂ ಸಹಾಯ, ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಎರಡನೆಯದಾಗಿ ಕೆಲವು ಜನತಾ ಮನೆಗಳನ್ನು ರೈತರಿಗೆ ಕೊಟ್ಟಮೇಲೆ ಈಗ ಅದರ ಸಾಲವನ್ನು ವಸೂಲಿ ಮಾಡಲು ಅಧಿಕಾರಿಗಳು ರೈತರ ಬೆನ್ನು ಹತ್ತಿದ್ದಾರೆ. ಹಾಡ್ಕೋ ನೆರವನ್ನು ಪಡೆದು ಈ ಮನೆಗಳನ್ನು ಕಟ್ಟಿಸಿ ರೈತರಿಗೆ ಕೊಟ್ಟಿರುವುದು. ಈ ಮನೆಗಳ ಬೆಲೆ ಐದಾರು ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗುವುದಿಲ್ಲ ಅದ್ದರಿಂದ ಈ ಮನೆಗಳ ಮೇಲಿನ ಸಾಲವನ್ನು ಪೂರ್ತಿಯಾಗಿ ಮನ್ನಾ ಮಾಡಬೇಕೆಂದು ಕೇಳಿಕೊಳ್ಳಲಾಗಿತ್ತು. ಆದರೆ ಅದಕ್ಕೆ ಇಲ್ಲಿ ಉತ್ತರ ಕೊಟ್ಟಿಲ್ಲ ಮತ್ತೆ ಸಮ್ಮಿಶ್ರ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಜಮೀನುದಾರರು ಸರ್ಕಾರದ ಜಮೀನನ್ನು ಒತ್ತುವರಿ ಮಾಡಿಕೊಂಡಿದಾರೆಂಬ ವರದಿ ಸಹ ನಮಗೆ ಬಂದಿದೆ. ದೊಡ್ಡ ದೊಡ್ಡ ಕಾಫಿ ಪ್ಲಾಂಟರ್ಸ್ ಏನಾದರೂ ಸರ್ಕಾರದ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡಿದ್ದರೆ, ಅಂತಹವರ ಬಗ್ಗೆ ಸರ್ಕಾರ ಏನಾದರು ಚಾಕಚಕ್ಯತೆಯನ್ನು ಉಪಯೋಗಿಸಿ ಕ್ರಮ ಕೈಕೊಳ್ಳಬೇಕಾಗುತ್ತದೆ. ಇಂತಹವರಿಗೆಲ್ಲಾ ರಕ್ಷಣೆ ಕೊಡಲು ಸರ್ಕಾರ ಮನಸ್ಸು ಮಾಡಿದರೆ ನಾಳೆ ದಿವಸ ಎಸ್.ಸಿ. ಮತ್ತು ಎಸ್.ಟಿ. ಜನರಿಗೆ ಬಹಳ ತೊಂದರೆ ಬರುತ್ತದೆ. ಈ ಕಾರಣದಿಂದ ಸರ್ಕಾರದ ಜಮೀನು ದೊಡ್ಡ ದೊಡ್ಡ ಜಮೀನುದಾರರಿಗೆ ಸಿಗದಂತೆ ಸೂಕ್ತ ಕಾನೂನನ್ನು ಜಾರಿಯಲ್ಲಿ ತರಬೇಕು. ಮುಖ್ಯವಾಗಿ ಎಸ್.ಸಿ. ಮತ್ತು ಎಸ್.ಟಿ. ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಮತ್ತು ಈ ಬಗ್ಗೆ ಸೂಕ್ತ ಕಾನೂನನ್ನು ಮಾಡಬೇಕು. ಈ ಕಾನೂನು ಜಾರಿಯಲ್ಲಿ ಬರುವವರೆಗೆ ಈ ಜನರಿಗೆ ಸೂಕ್ತ ರಕ್ಷಣೆಯನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನುಳಿದ ವಿಚಾರಗಳ ಬಗ್ಗೆ ಮಾನ್ಯ ಭೂಪತಿ ಅವರು ಕ್ವಾಲಿಫಿಕೇಷನ್ ಕೇಳುತ್ತಾರೆ?

ಶ್ರೀ ಯು. ಭೂಪತಿ. — ಮಾನ್ಯ ಅಧ್ಯಕ್ಷರೇ, ಇಲ್ಲಿ ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯನ್ನು ನಿಗದಿ ಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದ್ದರೂ ಸಹ ಇದರಲ್ಲಿ ರಾಜ್ಯಸರ್ಕಾರದ ಪ್ರಯತ್ನ ಕೂಡ ಬಹಳ ಮುಖ್ಯವಾದುದು. ಆದರೂ ಈ ಬಗ್ಗೆ ಇಲ್ಲಿ ಏನು ಹೇಳಿದ್ದಾರೆಂದರೆ.—

> "... ರಾಜ್ಯ ಸರ್ಕಾರವು ರಾಜ್ಯ ರೈತರ ಸಮಸ್ಯೆಗಳ ಅಧ್ಯಯನ ಸಮಿತಿ ಮತ್ತು ಕೃಷಿ ಇಲಾಖೆಯ ಕೃಷಿ ಉತ್ಪನ್ನ ಹೆಚ್ಚಿದ ಬಗ್ಗೆ ಅಧ್ಯಯನ ನಡೆಸಿ ಸೂಚಿಸುವ ಬೆಂಬಲ ಬೆಲೆಗಳಲ್ಲಿ ಯಾವುದು ಹೆಚ್ಚಾಗಿರುವುದೋ ಅಂತಹ ಬೆಲೆಯನ್ನು ನಿಗದಿ ಮಾಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಾ ಬಂದಿರುತ್ತದೆ."

ಇಲ್ಲಿಯಂವರೆಗೆ ಹಲವಾರು ಸಲ ಕೃಷಿ ಮಂತ್ರಿಗಳ ಸಭೆಯನ್ನು ಕೇಂದ್ರದ ಕೃಷಿ ಮಂತ್ರಿಗಳು ಕೇಂದ್ರ ಸರ್ಕಾರದ ಮಟ್ಟದಲ್ಲಿ ಕರೆದಿದ್ದಾರೆ. ಇಂತಹ ಸಭೆಯನ್ನು ಪ್ರಧಾನ ಮಂತ್ರಿಗಳು ಇಲ್ಲವೇ ಕೇಂದ್ರದ ಸಂಬಂಧಪಟ್ಟ ಮಂತ್ರಿಗಳು ಕರೆದಾಗ ಅಲ್ಲಿ ಕೃಷಿ ಉತ್ಪನ್ನಗಳ ಬೆಂಬಲ ಬೆಲೆ ನಿಗದಿ ಮಾಡುವ ಬಗ್ಗೆ ಚರ್ಚೆ ಆಗಿಲ್ಲವೇ? ಚರ್ಚೆ ಆಗಿದ್ದರೆ ಅದರ ರಿಪೋರ್ಟ್–ಕಮ್ ಏನು ಎಂಬುದನ್ನು ನಾವು ತಿಳಿಸಬೇಕು.

ಎರಡನೆಯದಾಗಿ, ನಾವು ಕಳೆದ ವರ್ಷ ಅದಕ್ಕಿಂತಲೂ ಹಿಂದಿನ ವರ್ಷ ಜೋಳಕ್ಕೆ ಒಂದು ಕ್ವಿಂಟಾಲಿಗೆ ಇಷ್ಟು ಬೆಂಬಲ ಬೆಲೆ ಎಂದು ನಿಗದಿ ಮಾಡಿದ್ದೀರಿ. ಇಂತಹ ಒಂದು ಬೆಲೆಯನ್ನು ಎಲ್ಲಾ ಬೆಳೆಗಳಿಗೂ ಏಕೆ ಕೊಡಬಾರದು ಬೇರೆ ಬೆಳೆಗಳಿಗೆ ಕೊಡುವುದಕ್ಕೆ ಆಗುವುದಿಲ್ಲವೇ ? ಇನ್ನು ಮಾನ್ಯ ಶಾಣಪ್ಪನವರು ಹೇಳಿದ ಹಾಗೆ ಸಿ ಅಂಡ್ ಡಿ ಕ್ಲಾಸ್ ಅನ್‌ಆಥರೈಸ್ಡ್ ಕಲ್ಟಿವೇಷನ್ ಮಾಡಿರುವ ಲ್ಯಾಂಡನ್ನು ರೆಗ್ಯುಲರೈಸ್ ಮಾಡುವುದರ ಬಗ್ಗೆ ಬಹಳ ವಿಚಿತ್ರವಾದಂಥ ಗೊಂದಲ ಇದೆ. ಮಾನ್ಯ ಕಂದಾಯ ಸಚಿವರಿಗೆ ಈ ಗೊಂದಲ ಏನು ಎನ್ನುವುದು ಗೊತ್ತಿದೆ. ನಾವು ಕಾಯಿದೆಯನ್ನು ಮಂಡಿಸುತ್ತೀರಿ, ಇದು ರೆವಿನ್ಯೂ ಲ್ಯಾಂಡ್‌ಗೆ ಮಾತ್ರ ಅಪ್ಲೈ ಆಗುತ್ತದೆ, ಬೇರೆ ಲ್ಯಾಂಡ್‌ಗೆ ಅಪ್ಲೈ ಆಗುವುದಿಲ್ಲ. ಅನಧಿಕೃತವಾಗಿ ಸಾಗುವಳಿ ಮಾಡತಕ್ಕಂಥ ಜಮೀನು ಹೆಚ್ಚಾಗಿ ಮಲೆನಾಡು ಪ್ರದೇಶದಲ್ಲಿ ದೊಡ್ಡ ದೊಡ್ಡ ಪ್ಲಾಂಟರ್‌ಗಳಲ್ಲಿ ಜಾಸ್ತಿ ಇದೆ. ಮತ್ತೆ ಹೆಚ್ಚಿನ ಅಂಶದ ಭೂಮಿ ಅರಣ್ಯ ಇಲಾಖೆಗೆ ವರ್ಗ ಆಗಿದೆ, ಅದನ್ನು ಅವರು ರಿಸರ್ವ್ ಫಾರೆಸ್ಟ್ ಎಂದು ಬರೆದುಕೊಂಡಿದ್ದಾರೆ. ಇದು ಬಳ್ಳಾರಿ ಜಿಲ್ಲೆಯಲ್ಲಿದೆ. ಖಾಲಿ ಭೂಮಿಯನ್ನು ರಿಸರ್ವ್ ಫಾರೆಸ್ಟ್ ಎಂದು ಬರೆದುಕೊಂಡಿದ್ದಾರೆ. ಕೆಲವು ಕಡೆ ರೈತರು ಸಾಗುವಳಿ ಮಾಡುತ್ತಾ ಇದ್ದಾರೆ. ಈ ಬಗ್ಗೆ ಕಮಿಟಿ ಏನಿದೆ ಆ ಕಮಿಟಿಯಲ್ಲಿ ಅರ್ಜಿ ಹಾಕಿರಬೇಕು. ರಿಕಾರ್ಡ್ ಮಾಡಿರಬೇಕು ಎಂದು ಹೇಳುತ್ತೀರಿ. ಈಗ ಸಾಗುವಳಿ ಮಾಡುತ್ತಿರುವ ಭೂಮಿಯಲ್ಲಿ ಗುಂಡಿಗಳನ್ನು ತೋಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಬಳ್ಳಾರಿ ಜಿಲ್ಲಾಧಿಕಾರಿಗಳು ಡಿ.ಎಫ್.ಒ.ಗೆ ಬನ್ನಿ ಸ್ಪಾಟ್‌ಗೆ ಹೋಗೋಣ ಅಂದರೆ He is not even prepared to go the spot. He is such an Officer. ನೀವು ವಿಧಾನಸೌಧದಲ್ಲಿ ಹೇಳಿಬಿಡುತ್ತೀರಿ, ರೈತರನ್ನು ಎವಿಕ್ಟ್ ಮಾಡದ ಹಾಗೆ ಮಾಡಿಂತ್ತೇವೆ ಎಂದು ಹೇಳುತ್ತೀರಿ. Nobody cares for your orders. That is our problem. ಆದ ಕಾರಣ ಸರ್ಕಾರಿಆಜ್ಞೆ ತೆಗೆದುಕೊಂಡು ಬರುವುದಕ್ಕೆ ಸಾಧ್ಯವಾದರೆ ತನ್ನಿ. ಸಾಮಿರಾರು ಜನರನ್ನು ಎವಿಕ್ಟ್ ಮಾಡಿಸಬೇಡಿ. ಹೆಂ ಪರ್ಸೆಂಟ್ ಫಾರೆಸ್ಟ್ ಕ್ರಾಪ್ಸ್ ಕಂಪಲ್‌ಷನ್ ಮಾಡಬೇಕು ಎಂದು ಹೇಳುತ್ತೀರಿ. ರೈತರಿಗೆ ಭೂಮಿ ಸಿಗಬೇಕು ಇದನ್ನು ಮಾಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ —ಈ ಪ್ರಕಾರ ಪಾಜ್ಯವನ್ನು ಬಗೆಹರಿಸಲಿಕ್ಕೆ ಕಮಿಟಿ ಮಾಡಿದ್ದೀರಿ ತಾಲ್ಲೂಕ್ ಲೆವೆಲ್‌ನಲ್ಲಿ. ಇದರ ಬಗ್ಗೆ ಅನೇಕಸಾರಿ ಚರ್ಚೆಯಾಯಿತು. ಇದರಲ್ಲಿ ಸ್ಥಳೀಯ ಶಾಸಕರು ಎಂದು ಕೊಟ್ಟಿದ್ದೀರಿ. ಚಿತ್ತಾಪುರ ತಾಲ್ಲೂಕಿನಲ್ಲಿ ೩ ಜನ ಶಾಸಕರು ಇದ್ದಾರೆ. ಗುಲ್ಬರ್ಗದಲ್ಲಿ ೫ ಜನ ಶಾಸಕರು ಇದ್ದಾರೆ. ಆದ್ದರಿಂದ ಅದರಲ್ಲಿ ಎಷ್ಟು ಶಾಸಕರು ಇರುತ್ತಾರೆ ಎಂದು ಕ್ಲಾರಿಫೈ ಮಾಡಿ. ಚಿತ್ತಾಪುರ ತಾಲ್ಲೂಕಿನಲ್ಲಿ ಶ್ರೀ ವಿಶ್ವನಾಥ ಪಾಟೀಲರು ಇದ್ದಾರೆ. ಅವರೊಬ್ಬರು ಅಲ್ಲಿ ಇದ್ದರೆ ನಾವು ಏನು ಮಾಡುವುದು ಅಲ್ಲಿ. ಒಂದು ತಾಲ್ಲೂಕಿನಲ್ಲಿ ಇಬ್ಬಿಬ್ಬರು ಶಾಸಕರು ರಿಪ್ರೆಸೆಂಟ್ ಮಾಡುತ್ತಾರೆ. ಎಷ್ಟು ಜನ ಶಾಸಕರು ಅದರಲ್ಲಿ ಇರುತ್ತಾರೆ ಎಂದು ಕ್ಲಾರಿಫೈ ಮಾಡಬೇಕು. ಆವೇಲೆ ಈ ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್‌ನ್ನು ತರಿಸುವುದಕ್ಕೆ ವಂಂಚಿತವಾಗಿ ಇದರ ಮೇಲೆ ಚರ್ಚೆಯಾಗಿ, ಸರ್ಕಾರ ಪರ್ಫೆಕ್ಟ್‌ಗಿ ಕಾನೂನು ಮಾಡುವವರೆಗೆ ಎಲ್ಲೆಲ್ಲಿ ಸರ್ಕಾರಿ ಜಮೀನು ಇದೆ, ೧೫-೨೦ ವರ್ಷಗಳಿಂದ ಸಾಗುವಳಿ ಮಾಡುತ್ತಾ ಇದ್ದಾರೆ ಸಿ ಅಂಡ್ ಡಿ ಯಲ್ಲಿ ಕೊಟ್ಟಂಥ ಜಮೀನು ಏನಿದೆ ಅದರಿಂದ ಅವರನ್ನು ಬಿಡಿಸಬಾರದು ಎಂದು ಸ್ಪಷ್ಟವಾಗಿ ಆರ್ಡರನ್ನು ಪ್ರತಿಯೊಬ್ಬ ಡಿ.ಸಿ.ಗೂ, ಫಾರೆಸ್ಟ್ ಆಫೀಸರಿಗೂ ಕಳಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರದಲ್ಲಿ ಅನೇಕ ಸಲ ಈ ಸಭೆಯಲ್ಲಿ ಚರ್ಚೆಯಾಗಿದೆ. ಮೊನ್ನೆಯ ದಿವಸ ನಮ್ಮ ಸ್ನೇಹಿತರು ಇಲ್ಲಿಗೆ ರೈತರನ್ನೂ ಕೃಷಿ ಕಾರ್ಮಿಕರನ್ನು ಕರೆದುಕೊಂಡು ಬಂದು ಮೆಮೊರ್ಯಾಂಡಂ ಕೊಟ್ಟಿದ್ದಾರೆ. ಮೊದಲನೆಯದಾಗಿ, ಕಂದಾಯ ಇಲಾಖೆಯ ಜಮೀನನ್ನು ಯಾರು ಮಾಡಿದ್ದಾರೆ, ಅವರ ವಿಚಾರದಲ್ಲಿ ಒಂದು ಸರ್ಕ್ಯುಲರ್ ಕಳಿಸಿದ್ದೇವೆ. ಅಮೆಂಡ್‌ಮೆಂಟ್

ಪಾಸಾಗುವವರೆಗೂ, ೧೯೮೪ಕ್ಕಿಂತ ಮೊದಲು ಯಾರು ಸಾಗುವಳಿ ಮಾಡುತ್ತಿದ್ದರು ಅವರನ್ನು ಎವಿಕ್ಷನ್ ಮಾಡಬಾರದು ಎಂದು ಸರ್ಕಾರ್‌ಲರ್ ಕಳಿಸಿದೆ. ಆಮೇಲೆ ರಿಸರ್ವ್ ಫಾರೆಸ್ಟ್‌ನಲ್ಲಿ ೧೯೭೮ಕ್ಕಿಂತ ಮೊದಲು ಅತಿಕ್ರಮಣ ಮಾಡಿದವರಿಗೆ ಫಾರೆಸ್ಟ್ ಇಲಾಖೆಯಲ್ಲಿ ಕಮಿಟಿಯನ್ನು ನೇಮಿಸಿದ್ದೇವೆ. ಆ ಕಮಿಟಿಯನ್ನು ಇತ್ತೀಚೆಗೆ ನೇಮಿಸಿದ್ದೇವೆ. ಕೆಲವು ಕಡೆ ಇನ್ನೂ ನೇಮಿಸಿಲ್ಲ. ಕಮಿಟಿ ಕಂಟಿನ್ಯೂ ಆಗುತ್ತದೆ. ಅದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ, ಆ ಒಪ್ಪಿಗೆಯನ್ನು ಪಡೆದುಕೊಳ್ಳತಕ್ಕ ಪ್ರಯತ್ನ ಮಾಡುತ್ತೇವೆ. ಸಿ ಅಂಡ್ ಡಿ ಕ್ಲಾಸ್ ಜಮೀನು ಏನಿದೆ ಅದರ ಬಗ್ಗೆ ಅನೇಕ ಸಲ ಹೇಳಿದ್ದೇನೆ. ೧೯೮೦–೮೧ನೇ ಇಸವಿಯಲ್ಲಿ ಸಂಪಾರು ೨೫ ಲಕ್ಷ ಎಕರೆ ಜಮೀನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗಾವಣೆ ಆಗಿದೆ. ಅರಣ್ಯ ಇಲಾಖೆಯವರು ಅರಣ್ಯವನ್ನು ಬೆಳೆಸುತ್ತಾ ಇದ್ದಾರೆ. ಆದರೆ ಆಜ್ಞೆ ಆಗುವುದಕ್ಕಿಂತ ಮುಂಚೆ ಕೆಲವು ಕಡೆ ಅತಿಕ್ರಮಣ ಮಾಡಿ, ಸಾಗುವಳಿ ಮಾಡಿರತಕ್ಕ ಜನರು ಇದ್ದಾರೆ. ೮-೧೦ ವರ್ಷಗಳಿಂದ ಇದ್ದು, ಮನೆಕಟ್ಟಿಕೊಂಡು ತೋಟಗಳನ್ನು ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಕಾನೂನು ಇಲಾಖೆಯ ಸಲಹೆಯನ್ನು ಪಡೆದುಕೊಂಡಿದ್ದೇನೆ. ಆಜ್ಞೆಯನ್ನು ಇನ್ನು ಹೊರಡಿಸಿಲ್ಲ. ಅರಣ್ಯ ಇಲಾಖೆಗೆ ವರ್ಗಾಹಿಸಿದ ಮೇಲೆ ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯಬೇಕೆಂದು ಹೇಳುತ್ತಿದ್ದಾರೆ. ಆದರೆ ನನ್ನ ಅಭಿಪ್ರಾಯ ಅದರ ಅವಶ್ಯಕತೆ ಇಲ್ಲ, ಈ ಮನೆಯಲ್ಲಿ ಹೇಳಿದ್ದೇನೆ. ಸೂಕ್ತವಾದಂತಹ ಆಜ್ಞೆಯನ್ನು ಮಾಡುವವರೆಗೆ ಅರಣ್ಯ ಇಲಾಖೆಯ ಭೂಮಿಯನ್ನು ಅತಿಕ್ರಮಣ ಮಾಡಿದವರನ್ನು ಬಿಡಿಸತಕ್ಕ ಪ್ರಯತ್ನ ಮಾಡುವುದಿಲ್ಲ. ಆದರೆ ಇತ್ತೀಚೆಗೆ ಈ ಮಸೂದೆ ಬಂದಮೇಲೆ ಅರಣ್ಯ ಬೆಳೆಸತಕ್ಕ ಭೂಮಿಯನ್ನು ಅನೇಕ ಜನ ಅತಿಕ್ರಮಣ ಮಾಡಿದ್ದಾರೆ. ಹೊಸದಾಗಿ ಅತಿಕ್ರಮಣ ಮಾಡಿರತಕ್ಕ ಪ್ರಸಂಗಗಳು ಇವೆ. ಆದರೆ ಇದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಬಹಳ ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡಿರತಕ್ಕವರಿಗೆ ತೊಂದರೆ ಕೊಡಬೇಡಿಯೆಂದು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಮತ್ತೆ ತಾಲ್ಲೂಕು ಮಟ್ಟದಲ್ಲಿ ಮೂರು ಜನ ಸದಸ್ಯರುಗಳು ಇದ್ದರೆ ಒಬ್ಬರು ಮಾತ್ರ ಸಮಿತಿಯಲ್ಲಿರುತ್ತಾರೆ.

ನಿಯಮ ೩೩ಳಿರ ಮೇರೆಗೆ

೧) ರಾಜಾಜಿನಗರದ ೬ನೇ ವಿಭಾಗದಲ್ಲಿರುವ ಸರ್ಕಾರಿ ನೌಕರರ ವಸತಿ ಗೃಹಗಳಲ್ಲಿರುವ ಕೊಳವೆ ಬಾವಿಗಳು ಕೆಟ್ಟು ಹೋಗಿ ತೊಂದರೆಯಾಗಿರುವುದರ ಬಗ್ಗೆ.

ಶ್ರೀ ಆರ್, ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೆ, ರಾಜಾಜಿನಗರದ ೬ನೇ ವಿಭಾಗದಲ್ಲಿರುವ ಸರ್ಕಾರಿ ನೌಕರರ ವಸತಿ ಗೃಹಗಳಲ್ಲಿ ಹೆಚ್. ಮತ್ತು ಜೆ ಬ್ಲಾಕಿನ ಕೊಳವೆ ಬಾವಿ ೧೫ ದಿನಗಳಿಂದ ಕೆಟ್ಟಿದ್ದು ಅದನ್ನು ದುರಸ್ತಿ ಮಾಡಿ, ಅಲ್ಲಿ ವಾಸಿಸುವ ಜನಗಳಿಗೆ ನೀರಿಗಾಗಿ ಬಹಳ ತೊಂದರೆಯಾಗಿರುತ್ತದೆ. ಆ ಬಗ್ಗೆ ಅಲ್ಲಿಯ ನಿವಾಸಿಗಳು ಸಂಬಂಧಪಟ್ಟ ಸಹಾಯಕ ಕಾರ್ಯಕಾರಿ ಅಭಿಯಂತರನ್ನು ಸಂಪರ್ಕಿಸಿದಾಗ ಇಲಾಖೆಯಲ್ಲಿ ಯಂತ್ರದ್ದುರಸ್ತಿಗಾಗಿ ಹಣವಿಲ್ಲವೆಂದು ಮತ್ತು ಈ ಹಿಂದೆ ಇದೇ ರೀತಿ ದುರಸ್ತಿ ಮಾಡಿಸಿದ್ದ ಕೆಲಸಗಳಿಗೆ ಇನ್ನು ಹಣ ಪಾವತಿ ಆಗಿಲ್ಲವೆಂದು ತಿಳಿಸಿರುತ್ತಾರೆ.

ಆದ್ದರಿಂದ ಈ ಬ್ಲಾಕುಗಳ ಯಂತ್ರವನ್ನು ದುರಸ್ತಿ ಮಾಡಲು ಹಾಗೂ ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ಇಲಾಖೆಯವರಿಗೆ ನಿರ್ದೇಶಿಸಿ ಮತ್ತು ಹಣ ಒದಗಿಸಿ ಹೆಚ್. ಮತ್ತು ಜೆ ಬ್ಲಾಕಿನ್ನು ೧೫ ದಿವಸಗಳಿಂದ ನೀರಿಗಾಗಿ ಬವಣೆ ಪಡುತ್ತಿರುವ ಜನತೆಯ ತೊಂದರೆಯನ್ನು ಹೋಗಲಾಡಿಸಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಈ ಸದನದ ಮೂಲಕ ತಿಳಿಯಪಡಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಈ ನೌಕರರ ವಸತಿ ಗೃಹಗಳಿಗೆ ಬೆಂಗಳೂರು ನೀರು ಸರಬರಾಜು ಮಂಡಳಿಯವರಿಂದ ನೀರಿನ ಸರಬರಾಜು ವ್ಯವಸ್ಥೆ ಇದೆ ಇದು ಸಾಲದೆ ಇರುವುದರಿಂದ ಮೂರು ಬೋರ್‌ವೆಲ್‌ಗಳಿಂದಲೂ ನೀರನ್ನು ಸರಬರಾಜು ಮಾಡಲಾಗುತ್ತಿದೆ.